ಕರುಣಾಕರನ್ 'ಕಾಸ್ಟ್ ಸಿಸ್ಟಮ್' (ಜಾತಿ ಪದ್ಧತಿ) ಪುಸ್ತಕ ಕೊಟ್ಟು ಪುಟ್ಟ ಲೇಖನ ತರ್ಜುಮೆ ಮಾಡಿಸಿದ್ದರು. ಈ ಓದು ಜಾತಿ, ಅಸ್ಪೃಶ್ಯತೆಯನ್ನು ನನ್ನ ಅರಿವಿಗೆ ತಂದಿತು. ಇದೇ ಸಮಯದಲ್ಲಿ ಕವಿ ಕೆ.ಬಿ. ಸಿದ್ಧಯ್ಯ ತಿಪಟೂರಿಗೆ ಉಪನ್ಯಾಸಕರಾಗಿ ಬಂದರು. ನಟರಾಜ್ ಹುಳಿಯಾರ್ ಅವರ ರೂಂ ಸಮೀಪದಲ್ಲಿಯೇ ಕೆ.ಬಿ. ಅವರ ಮನೆ ಇತ್ತು. ಅದಾಗಲೇ ನಮಗೆ ಅವರು ಪತ್ರಿಕೆಗಳ ಮೂಲಕ ತಲುಪಿದ್ದರು. ಸಿದ್ಧಯ್ಯ, ಬಿ.ಆರ್. ಅಂಬೇಡ್ಕರ್ ಅವರ 'ಅನ್ನಿಹಿಲೇಷನ್ ಆಫ್ ಕಾಸ್ಟ್' (**Annihilation of Caste**) ಪುಸ್ತಕ ಓದಿಸಿದರು.

ದಲಿತರ ಹಟ್ಟಿಗಳನ್ನು ಮೊದಲ ಬಾರಿಗೆ ನಾನು ನೋಡಿದ್ದು ಅವರ ಜತೆಯಲ್ಲಿಯೇ. ಅಲ್ಲಿ ನನ್ನ ಕೈಯಲ್ಲಿ ಭಾಷಣ ಮಾಡಿಸುತ್ತಿದ್ದರು. ಬಂಧುಗಳೇ ಎಂದು ಕೆ.ಬಿ. ಸಿದ್ಧಯ್ಯ ಭಾಷಣ ಆರಂಭಿಸುತ್ತಿದ್ದರು. ಆದರೆ ಬಂಧುಗಳೇ ಎಂದು ಹೇಳಲು ನನಗೆ ಪಾಪಪ್ರಜ್ಞೆ. ನಿಮ್ಮ ಜತೆ ಇದ್ದು ಕೆಲಸ ಮಾಡಬೇಕು ಎಂದುಕೊಂಡಿದ್ದೇನೆ ಎಂದು ಹೇಳುತ್ತಿದ್ದೆ. ಈ ಹಟ್ಟಿ ಭೇಟಿಗಳು ನನ್ನ ಓದುವ ಮತ್ತು ನೋಡುವ ಕ್ರಮವನ್ನು ತೀವ್ರವಾಗಿ ಬದಲಿಸಿದವು.

ರೈತ ಸಂಘದ ಹೋರಾಟಗಳ ಸಂದರ್ಭದಲ್ಲಿ ಜೈಲಿಗೂ ಹೋಗಿದ್ದೆ. ಕಬ್ಬಿನ ವಿಚಾರದಲ್ಲಿ ಹೋರಾಟ ಮಾಡಿ ಜೈಲಿಗೆ ಹೋದಾಗ ನಾನು ಮತ್ತು ರೈತ ಮುಖಂಡ ಕೆ.ಎಸ್. ಪುಟ್ಟಣಯ್ಯ ಜೈಲು ಸಹಪಾಠಿಗಳಾಗಿದ್ದೆವು.

◆ **ಹಾಗಿದ್ದರೆ ರಂಗಭೂಮಿಯ ಅನುಭವ ಮತ್ತು ಹೋರಾಟದ ಹಿನ್ನೆಲೆಯೊಂದಿಗೇ ನೀವು ನೀನಾಸಂಗೆ ಹೋದಿರಾ?**

ಚಳವಳಿಗಳಲ್ಲಿ ತೊಡಗಿಕೊಂಡಿದ್ದಾಗಲೇ, ಶಾಸ್ತ್ರೀಯವಾಗಿ ರಂಗಭೂಮಿಯನ್ನು ಅಧ್ಯಯನ ಮಾಡಬೇಕು ಎನಿಸಿತು. ನೀನಾಸಂನಲ್ಲಿ ಡಿಪ್ಲೊಮಾ ಕೋರ್ಸಿಗೆ

## ತುಳಿತಕ್ಕೆ ಒಳಗಾದವರ ಪರ ಕೆಲಸ

ರೈತ ಸಂಘದ ಹೋರಾಟ ಸಮಿತಿಯಲ್ಲಿ ಕೆಲಸ ಮಾಡುತ್ತಿದ್ದೆ. ಬೆಂಗಳೂರಿನಲ್ಲಿ ಒಂದು ಸಭೆ ಆಯೋಜಿಸಲಾಗಿತ್ತು. 'ನಾನು ಬ್ರಾಹ್ಮಣ. ಈ ಚಳವಳಿ, ಹೋರಾಟಗಳಲ್ಲಿ ನನ್ನ ಹೇಗೆ ರೂಪಿಸಿಕೊಳ್ಳಬೇಕು' ಎಂದು ವಿದ್ಯಾರ್ಥಿಯಂತೆ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರಲ್ಲಿ ಕೇಳಿದ್ದೆ.

ಆಗ ಲೋಹಿಯಾ ಅವರ ಮಾತುಗಳನ್ನು ಉದಾಹರಣೆ ಕೊಟ್ಟ ನಂಜುಂಡಸ್ವಾಮಿ, 'ತುಳಿತಕ್ಕೆ ಒಳಗಾದವರ ಪರವಾಗಿ ಮತ್ತು ಸಾಮಾಜಿಕ ಕೆಲಸಗಳನ್ನು ಮಾಡುವಾಗ ಒಬ್ಬ ಬ್ರಾಹ್ಮಣ ಅಥವಾ ಮೇಲ್ವರ್ಗದ ವ್ಯಕ್ತಿ ಇದು ನನ್ನ ಕರ್ತವ್ಯ ಎಂದು ಮಾಡಬೇಕು. ಅನ್ಯಾಯಕ್ಕೆ ಒಳಗಾದವರು ಇದು ನಮ್ಮ ಹಕ್ಕು ಎಂದು ಕೆಲಸ ಮಾಡುತ್ತಿರಬೇಕು. ಆಗ ಹೆಚ್ಚು ಹೆಚ್ಚು ಬೆಳೆಯಲು ಸಾಧ್ಯ' ಎಂದರು.

ದೇಸಿ ಬೀಜಗಳ ತಳಿ ಉಳಿಸಿಕೊಳ್ಳುವ ಚಳವಳಿ, ಪೇಟೆಂಟ್, ಗ್ಯಾಟ್ ಒಪ್ಪಂದ... ಹೀಗೆ ಹಲವು ಜಾಗತಿಕ ವಿಷಯಗಳ ಬಗ್ಗೆ ಅವರಿಗೆ ಹೆಚ್ಚಿನ ಜ್ಞಾನ ಇತ್ತು. ಅವರು ನಿಜಕ್ಕೂ ಒಬ್ಬ ಅತ್ಯುತ್ತಮ ಆರ್ಥಿಕ ತಜ್ಞ. ಅವರಿಗೆ ದೂರದೃಷ್ಟಿ ಇತ್ತು. ಆದರೆ ಅವರನ್ನು ಮತ್ತು ಅವರ ವಿಚಾರಗಳನ್ನು ನಮ್ಮ ವೈಚಾರಿಕ ಜಗತ್ತು ಸ್ವೀಕರಿಸಲಿಲ್ಲ.